ಆ) ಕೇಂದ್ರ ಸಂಪನ್ಮೂಲ ಮಂತ್ರಾಲಯದ ಅಂತರ್ಜಲ ಸಂಪನ್ಮೂಲಗಳ ಅಂದಾಜು ಸಮಿತಿ 1997ರ ಮಾರ್ಗಸೂಚಿಯನ್ವಯ ದಿನಾಂಕ:31–12–1999ರಲ್ಲಿ ಇದ್ದಂತೆ ರಾಜ್ಯದ ಜಲಾನಯನವಾರು ಅಂತರ್ಜಲ ಮಾಲೀಕರಣ ಕಾರ್ಯವು ಅಂತಿಮ ಹಂತದಲ್ಲಿದ್ದು ವರದಿಯನ್ನು ಆದಷ್ಟು ಶೀಘ್ರದಲ್ಲಿ ಪ್ರಕಟಿಸಲಾಗುವುದು. ಈ ಮಾಲೀಕರಣದ ಮೇರೆಗೆ ವಿಜಾಪುರ ಜಿಲ್ಲೆಯ ಇಂಡಿ, ವಿಜಾಪುರ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳ ಹಲವು ಭಾಗಗಳು ಅಂತರ್ಜಲ ಅಭಿವೃದ್ಧಿಗೆ ತೆರವಾಗುವ ಸಾಧ್ಯತೆ ಇದೆ.

ರಾಜ್ಯದಲ್ಲಿರುವ ನವಿಲುಗಳ ರಕ್ಷಣೆ

3277 (3815) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನವಿಲುಗಳ ಸಂಖ್ಯೆ ಎಷ್ಟು (ಜಿಲ್ಲವಾರು ಮಾಹಿತಿ ನೀಡುವುದು)

ಆ) ಈ ನವಿಲುಗಳನ್ನು ಸಂರಕ್ಷಣೆ ಮಾಡಲು ಹಾಗೂ ಇದರ ಸಂತತಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಶ್ರೀ ಕೆ. ಎಚ್. ರಂಗನಾಥ (ಅರಣ್ಯ ಸಚಿವರು)

ಅ) ನವಿಲುಗಳ ಗಣತಿಯನ್ನು ಮಾಡದೆ ಇರುವುದರಿಂದ ನಿಖರವಾಗಿ ನವಿಲುಗಳ ಸಂಖ್ಯೆಯನ್ನು ಹೇಳಲಾಗುವುದಿಲ್ಲ. ಆದಾಗ್ಯೂ ರಾಜ್ಯದ ಎಲ್ಲಾ ಅರಣ್ಯ ಪ್ರದೇಶಗಳಲ್ಲಿ ನವಿಲುಗಳು ಕಂಡುಬರುತ್ತವೆ.

ಆ) ನವಿಲುಗಳನ್ನು ಸಂರಕ್ಷಣೆ ಮಾಡುವ ಬಗ್ಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ಪ್ರಕಾರ ನಿಯಮಾನುಸಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ರೈತರಿಗೆ ವಿತರಿಸಿದ ಸಸಿಗಳು

3278 (3816) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಯಾವ ಯಾವ ಸಸಿಗಳನ್ನು ರೈತರಿಗೆ ಉಚಿತವಾಗಿ ನೀಡಲು ಸರ್ಕಾರ ಯೋಜಿಸಿದೆ;

ಆ) ಜಿಲ್ಲೆಯ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಈ ಸಾಲಿನಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು)

ಅ) ವಿಜಾಪುರ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗ ಮತ್ತು ಪ್ರಾದೇಶಿಕ ವಿಭಾಗಗಳ ವತಿಯಿಂದ 2003–04 ನೇ ಸಾಲಿನಲ್ಲಿ ಬೇವು, ಹುಣಸೆ ಸಾಗುವಾನಿ, ನೆಲ್ಲಿ, ಮಾವು, ನೇರಳೆ, ನುಗ್ಗೆ, ಬಿದಿರು, ಹೊಂಗೆ, ಸಿಹುಣಸೆ, ಸೀತಾಫಲ, ಬಸವನಪಾದ ಗೋಡಂಬಿ ಮುಂತಾದ ಜಾತಿಯ ಒಟ್ಟು 1,34,275 ಸಸಿಗಳನ್ನು ರೈತರಿಗೆ ಉಚಿತವಾಗಿ ವಿತರಿಸುವ ಗುರಿ ಇದೆ.

ಆ) ಒಟ್ಟು 102 ಹೆಕ್ಟೇರ್ ಪ್ರದೇಶದಲ್ಲಿ ಸಸಿ ನೆಡುವ ಕಾರ್ಯಕ್ರಮ ರೂಪಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿನ ಬರಪರಿಹಾರಕ್ಕೆ ಕೇಂದ್ರ ಸರ್ಕಾರದಿಂದ ಹಣ

3279 (3817) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?